JANUARY 03, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ‘ನೇಕಾರ ಸಮ್ಮಾನ್ ನಿಧಿ ಯೋಜನೆ’; 2024–25ನೇ ಸಾಲಿನಲ್ಲಿ, 1 ಲಕ್ಷ 17 ಸಾವಿರದ 459 ನೇಕಾರರಿಗೆ, ಧನ ಸಹಾಯ.
- ಪಶ್ಚಿಮಘಟ್ಟದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳ ಅನುಷ್ಠಾನ; ಶಿವಮೊಗ್ಗ ಜಿಲ್ಲೆ, ಪರಿಸರ ಮಿತ್ರರಿಂದ, ಇಂದು ಮಹತ್ವದ ಸಭೆ.
- ಬೆಳಗಾವಿ ಹಾಗೂ ಖಾನಾಪುರ ತಾಲೂಕಿನಲ್ಲಿ ಕಾಡಾನೆಗಳ ಚಲನವಲನ; ಮುಂಜಾಗ್ರತೆಗೆ ಅರಣ್ಯ ಇಲಾಖೆ, ಸೂಚನೆ.
- ಭಗವಾನ್ ಬುದ್ಧನ, ಪವಿತ್ರ ಪಿಪ್ರಹ್ವಾ ಅವಶೇ ’ಗಳ, ಪ್ರದರ್ಶನ; ಹೊಸ ದಿಲ್ಲಿಯಲ್ಲಿ ಇಂದು ಪ್ರಧಾನಮಂತ್ರಿ ಉದ್ಘಾಟನೆ.

<><><>

ಈಗ ವಾರ್ತೆಗಳ ವಿವರ

<><><>

‘ನೇಕಾರ ಸಮ್ಮಾನ್ ನಿಧಿ ಯೋಜನೆ’ ಅಡಿ, ಸಹಾಯಧನವನ್ನು 5 ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ; ಕಳೆದ, 2024–25ನೇ ಸಾಲಿನಲ್ಲಿ, 1 ಲಕ್ಷ 17 ಸಾವಿರದ 459 ನೇಕಾರರಿಗೆ, 58 ಕೋಟಿ 69 ಲಕ್ಷ ರೂಪಾಯಿ ಸಹಾಯಧನ ನೀಡಲಾಗಿದೆ ಎಂದು, ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಬೆಂಗಳೂರಿನ ಮಹಾಲಕ್ಷ್ಮೀಪುರಂ ಬಳಿಯ, ರಾಣಿ ಅಬ್ಬಕ್ಕ ಮೈದಾನದಲ್ಲಿ, ರಾಷ್ಟ್ರೀಯ ಕೈಮಗ್ಗ ಮೇಳ ಉದ್ಘಾಟಿಸಿ, ಮಾತನಾಡಿದರು. ಕಾವೇರಿ ಹ್ಯಾಂಡ್ಲೂಮ್ಸ್ ಅಧ್ಯಕ್ಷ ಜೆ.ಬಿ.ಗಣೇಶ ಮಾತನಾಡಿ, ತಮ್ಮ ಸಂಸ್ಥೆಯ ಪುನಃಶ್ಚೇತನಕ್ಕೆ, 25 ಕೋಟಿ ರೂಪಾಯಿ ಆರ್ಥಿಕ ನೆರವು ಒದಗಿಸುವಂತೆ, ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು.

<><><>

ರಾಜ್ಯ ಸರ್ಕಾರ, ಬೆಂಬಲ ಬೆಲೆ ಯೋಜನೆ ಅಡಿ, ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭಿಸಿ, ರೈತರ ಹಿತ ಕಾಯುವಂತೆ, ವಿಪಕ್ಷ ನಾಯಕ ಆರ್. ಅಶೋಕ ಒತ್ತಾಯಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ತಿಳಿಸಿ, ಮೆಕ್ಕೆಜೋಳ ಬೆಳೆಗಾರರು, ಪ್ರತಿ ಕ್ವಿಂಟಾಲ್‌ಗೆ ನಾಲ್ಕು ನೂರರಿಂದ, ಐನೂರು ರೂಪಾಯಿಗಳ ವರೆಗೆ, ನ ್ಟ ಅನುಭವಿಸುತ್ತಿದ್ದಾರೆ. ರೈತರ ಶ್ರಮ, ದಲ್ಲಾಳಿಗಳ ಪಾಲಾಗದಂತೆ ಕಾಪಾಡಲು, ಮುಖ್ಯಮಂತ್ರಿಯವರನ್ನು ಆಗ್ರಹಿಸಿದ್ದಾರೆ.

<><><>

ಯೂನೆಸ್ಕೋ ವಿಶ್ವ ಪಾರಂಪರಿಕ ತಾಣ, ವಿಜಯನಗರ ಜಿಲ್ಲೆಯ, ಹಂಪಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ, ರಾಜ್ಯದ ಮೊದಲ ಸಂಚಾರಿ 'ಅಕ್ಕ ಕ್ಯಾಂಟೀನ್' ಕಾರ್ಯಾರಂಭಿಸಿದೆ. ಶ್ರೀಜಗನ್‌ಜ್ಯೋತಿ ಸಂಜೀವಿನಿ ಗ್ರಾಮ ಪಂಚಾಯತ್ ಒಕ್ಕೂಟ, ಶ್ರೀ ವೈಷ್ಣವಿ ಮಹಿಳಾ ಸ್ವ ಸಹಾಯ ಸಂಘ, ಸಂಚಾರಿ ಅಕ್ಕ ಕ್ಯಾಂಟೀನ್ ಚುಕ್ಕಾಣಿ ಹಿಡಿದಿದ್ದು, ಹಂಪಿಯ ವಿಜಯ ವಿಠ್ಠಲ ದೇವಸ್ಥಾನದ ಮುಂಭಾಗದಲ್ಲಿ, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ ಚಾಲನೆ ನೀಡಿದರು. ಬಳಿಕ ಮಾತನಾಡಿ, ಪ್ರವಾಸಿಗರಿಗೆ ರುಚಿ, ಶುಚಿ ಹಾಗೂ ಯೋಗ್ಯದರ ಗುಣಮಟ್ಟದ ಉಪಾಹಾರ, ಸ್ವಸಹಾಯ ಗುಂಪಿನ ಮಹಿಳೆಯರಿಗೆ ಆರ್ಥಿಕ ಅನುಕೂಲ, ಅಕ್ಕ ಸಂಚಾರಿ ಕ್ಯಾಂಟೀನ್ ಒದಗಿಸಲಿದೆ, ಎಂದರು.

<><><>

ಪಶ್ಚಿಮಘಟ್ಟದ ಸೂಕ್ಷ್ಮ ಪಾರಿಸಾರಿಕ ವಲಯದಲ್ಲಿ, ಕೈಗೊಳ್ಳಲಾಗುತ್ತಿರುವ, ಬೃಹತ್ ಅಭಿವೃದ್ಧಿ ಯೋಜನೆಗಳ ಕುರಿತು, ಚಿಂತೆ ಮತ್ತು ಚಿಂತನೆ ವ್ಯಕ್ತ ಪಡಿಸಲು, ಶಿವಮೊಗ್ಗ ಜಿಲ್ಲೆ, ಪರಿಸರ ಮಿತ್ರರು, ಇಂದು ಬೆಳಗ್ಗೆ 11 ಗಂಟೆಗೆ ಸಾಗರದ, ಮಲೆನಾಡು ಸಿರಿ ಸಭಾಂಗಣದಲ್ಲಿ, ವಿಶೇಷ ಸಭೆ ಆಯೋಜಿಸಿದ್ದಾರೆ. ಹೆಸರಾಂತ ಪರಿಸರ ತಜ್ಞರು, ಸ್ಥಳೀಯ ಪರಿಸರ ಕಾರ್ಯಕರ್ತರು ಪಾಲ್ಗೊಳ್ಳಲಿದ್ದು, ಹಲವು ವಿಷಯಗಳ ಚರ್ಚೆ ನಡೆಯಲಿದೆ ಎಂದು, ಮಾಹಿತಿ ನೀಡಿದ್ದಾರೆ, ವೃಕ್ಷ ಲಕ್ಷ ಆಂದೋಲನದ ವಿಶ್ವಸ್ಥ ಕವಲಕೋಡು ಕೆ. ವೆಂಕಟೇಶ.

<><><>

ಕವಲಕೋಡು ವೆಂಕಟೇಶ ಧ್ವನಿ 44 ಸೆಕೆಂದುಗಳು

<><><>

ಬೆಳಗಾವಿ ಜಿಲ್ಲೆ, ಖಾನಾಪುರ ಹಾಗೂ ಬೆಳಗಾವಿ ತಾಲೂಕಿನ, ಬಕನೂರು, ಬೆಳವಟ್ಟಿ, ಬೈಲೂರು, ಕುಸಮಳ್ಳಿ, ಕಿನಯೆ, ಹಬ್ಬನಟ್ಟಿ ಹಾಗೂ ದೇವಚಿಹಟ್ಟಿ ಗ್ರಾಮಗಳ ಅಂಚಿನಲ್ಲಿ, ಕಾಡಾನೆಗಳ ಚಲನವಲನ ಕಂಡುಬಂದಿದೆ. ಗ್ರಾಮಸ್ಥರು ಸಂಜೆ 6 ಗಂಟೆಯಿಂದ ಬೆಳಗ್ಗೆ 8 ಗಂಟೆಯ ವರೆಗೆ, ಓಡಾಡದಂತೆ, ಬೆಳಗಾವಿ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ, ತುರ್ತು ಸಂದೇಶ ನೀಡಿದ್ದಾರೆ. ಕಾಡಾನೆಗಳ ಹಿಂಡು ಸುರಕ್ಷಿತವಾಗಿ ಸಾಗಲು, ಸಾರ್ವಜನಿಕರ ಜೀವ ಮತ್ತು ಆಸ್ತಿಗಳ ರಕ್ಷಣೆಯ ದೃಷ್ಟಿಯಿಂದ, ಕಡ್ಡಾಯವಾಗಿ ಸೂಚನೆ ಪಾಲಿಸುವಂತೆ, ಅವರು ಕೋರಿದ್ದಾರೆ.

<><><>

ಭಗವಾನ್ ಬುದ್ಧನ, ತಾಯ್ನಾಡು ಕಪಿಲವಸ್ತುವಿನ ಭೂಭಾಗ ಎಂದು ನಂಬಲಾದ, ಉತ್ತರ ಪ್ರದೇಶದ ಬೌದ್ಧ ಸ್ಥೂಪ ಒಂದರಲ್ಲಿ, 1898 ರಲ್ಲಿ ಪತ್ತೆಯಾದ, ಪವಿತ್ರ ಪಿಪ್ರಹ್ವಾ ಅವಶೇ ಗಳ, ಅಂತಾರಾಷ್ಟ್ರೀಯ ಪ್ರದರ್ಶನವನ್ನು, ಹೊಸ ದಿಲ್ಲಿಯ, ರಾಯ್ ಪಿಥೋರಾ ಸಾಂಸ್ಕೃತಿಕ ಸಂಕೀರ್ಣದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

ಹೊಸ ದಿಲ್ಲಿಯ, ರಾಷ್ಟ್ರೀಯ ವಸ್ತುಸಂಗ್ರಹಾಲಯ ಮತ್ತು ಕೋಲ್ಕೊತ್ತಾದ ಭಾರತೀಯ ವಸ್ತುಸಂಗ್ರಹಾಲಯದ ಸಂಗ್ರಹಗಳಲ್ಲಿ ಸಂರಕ್ಷಿಸಲಾದ, ಪಿಪ್ರಹ್ವಾ ಅಧಿಕೃತ ಅವಶೇ ‘ಗಳು ಮತ್ತು ಪುರಾತತ್ವ ವಸ್ತುಗಳನ್ನು, ಶತಮಾನಕ್ಕೂ ಹೆಚ್ಚು ಕಾಲದ ನಂತರ, ಮೊದಲ ಬಾರಿಗೆ, ಒಂದೆಡೆ ಪ್ರದರ್ಶಿಸಲಾಗುತ್ತಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಧಾರವಾಡದ ಖ್ಯಾತ ಪರಿಸರವಾದಿ, ಅಂತಾರಾಷ್ಟ್ರೀಯ ಖ್ಯಾತಿಯ, ಅತ್ಯಂತ ಎತ್ತರದ ಕ್ಯಾಕ್ಟಸ್ ಬೆಳೆದು, ಹಲವು ದಾಖಲೆ ನಿರ್ಮಿಸಿದ, ಪಂಡಿತ ಮುಂಜಿ ಅವರಿಗೆ, ರಾಜ್ಯ ವಿಜ್ಞಾನ ಸಂಶೋಧನಾ ಪರಿಷತ್, ಯಾದಗಿರಿಯಲ್ಲಿ ಆಯೋಜಿಸಿದ್ದ, ಮೂರು ದಿನಗಳ, 5ನೇ ರಾಜ್ಯ ವೈಜ್ಞಾನಿಕ ಸಮಾವೇಶದಲ್ಲಿ, ಡಾಕ್ಟರ್ ಎಚ್. ನರಸಿಂಹಯ್ಯ ಪರಿಸರ ಪ್ರಶಸ್ತಿ ನೀಡಿ, ಗಣ್ಯರು ಗೌರವಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಪಂಡಿತ ಮುಂಜಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪಂಡಿತ ಮುಂಜಿ ಧ್ವನಿ – 55 ಸೆಕೆಂದುಗಳು

<><><>

ಬಳ್ಳಾರಿ ಘರ್ಷಣೆಗೆ ಸಂಬಂಧಿಸಿ, ತಪ್ಪಿತಸ್ಥರ ವಿರುದ್ಧ, ಕಠಿಣ ಮತ್ತು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು, ಕಾನೂನು ಸುವ್ಯವಸ್ಥೆಯ, ಅಪರ ಪೊಲೀಸ್ ಮಹಾನಿರ್ದೇಶಕ ಹಿತೇಂದ್ರ ಸ್ಪಷ್ಟ ಪಡಿಸಿದ್ದಾರೆ. ಬಳ್ಳಾರಿ ಜಿಲ್ಲೆ, ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿ, ನಾಲ್ಕು ದೂರುಗಳು ದಾಖಲಾಗಿವೆ ಎಂದರು. ಈ ಮಧ್ಯೆ, ರಾಜ್ಯ ಗೃಹ ಇಲಾಖೆ, ಬಳ್ಳಾರಿ ಗಲಾಟೆ ಪ್ರಕರಣ ಸಂಬಂಧ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ, ಆದೇಶಿಸಿದೆ.

<><><>

ಯುವಜನರಲ್ಲಿ ಮಾದಕ ವಸ್ತುಗಳ ಬಳಕೆ ಮತ್ತು ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ, ತಿಳಿವಳಿಕೆ ಮೂಡಿಸಲು, ‘ಸನ್ಮಿತ್ರ ಕಾರ್ಯಕ್ರಮ’ ಆಯೋಜಿಸುವುದಾಗಿ, ಶಿವಮೊಗ್ಗ ಜಿಲ್ಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ ತಿಳಿಸಿದ್ದಾರೆ. ಜಿಲ್ಲಾ ಸಶಸ್ತ್ರ ಪಡೆ ಸಭಾಂಗಣದಲ್ಲಿ, ಅಧಿಕಾರ ಸ್ವೀಕರಿಸಿ, ಅವರು ಮಾತನಾಡಿದರು.

<><><>

ಮಾದಕ ವಸ್ತು ವ್ಯಸನದ ವಿರುದ್ಧ, ಜನ ಜಾಗೃತಿ ಪಾದಯಾತ್ರೆ ಹಾಗೂ ಸೈಕ್ಲಿಂಗ್ ಜಾಥಾಕ್ಕೆ, ಕೊಡಗು ಜಿಲ್ಲೆ, ಕುಶಾಲನಗರದಲ್ಲಿ, ಮಡಿಕೇರಿ ಶಾಸಕ ಮಂಥರಗೌಡ ಚಾಲನೆ ನೀಡಿದರು. ಆರ್ಯವೈಶ್ಯ ಸಮಾಜದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

<><><>

ರಾಷ್ಟ್ರೀಯ ಮನೋ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ, ನಿಮ್ಹಾನ್ಸ್ ಬೆಂಗಳೂರು ಸಂಯೋಜಿತ, ಸಮುದಾಯ ಮನೋ ಆರೋಗ್ಯ ಕೇಂದ್ರಕ್ಕೆ, 50 ವರ್ಷಗಳು ಪೂರ್ಣಗೊಂಡವು. ನಿಮಾನ್ಸ್ ದಕ್ಷಿಣ ಭಾಗದ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಸಮುದಾಯ ಮನೋ ಆರೋಗ್ಯ ಕೇಂದ್ರದ, ಸುವರ್ಣ ಮಹೋತ್ಸವ ಸಮಾರಂಭಕ್ಕೆ, ರಾಜ್ಯ ಮುಖ್ಯ ಕಾರ್ಯದರ್ಶಿ, ಶಾಲಿನಿ ರಜನೀಶ ಚಾಲನೆ ನೀಡಲಿದ್ದಾರೆ.

<><><>

ಧಾರವಾಡದಲ್ಲಿ ಎರಡನೇ ಆಧಾರ ಸೇವಾ ಮತ್ತು ನಿರ್ವಹಣಾ ಕೇಂದ್ರ ಸ್ಥಾಪನೆಗೆ, ಕೇಂದ್ರದಿಂದ ಅನುಮತಿ ಸಿಕ್ಕಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಧಾರವಾಡದ ಲಕ್ಷಾಂತರ ಜನರ ಅನುಕೂಲತೆ ದೃಷ್ಟಿಯಿಂದ, ಆಧಾರ ಸೇವಾ ಕೇಂದ್ರ ಸ್ಥಾಪನೆಗೆ ತಾವು, ಕೇಂದ್ರ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಅಶ್ವಿನಿ ವೈ ್ಣವ ಅವರಿಗೆ ಮನವಿ ಸಲ್ಲಿಸಿದ್ದಾಗಿ, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪ್ರಕಟಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- 'ನೇಕಾರ ಸಮ್ಮಾನ್ ನಿಧಿ ಯೋಜನೆ'; 2024–25ನೇ ಸಾಲಿನಲ್ಲಿ, 1 ಲಕ್ಷ 17 ಸಾವಿರದ 459 ನೇಕಾರರಿಗೆ, ಧನ ಸಹಾಯ.
- ಪಶ್ಚಿಮಘಟ್ಟದಲ್ಲಿ ಬೃಹತ್ ಅಭಿವೃದ್ಧಿ ಯೋಜನೆಗಳ ಅನುಷ್ಠಾನ; ಶಿವಮೊಗ್ಗ ಜಿಲ್ಲೆ, ಪರಿಸರ ಮಿತ್ರರಿಂದ, ಇಂದು ಮಹತ್ವದ ಸಭೆ.
- ಬೆಳಗಾವಿ ಹಾಗೂ ಖಾನಾಪುರ ತಾಲೂಕಿನಲ್ಲಿ ಕಾಡಾನೆಗಳ ಚಲನವಲನ; ಮುಂಜಾಗ್ರತೆಗೆ ಅರಣ್ಯ ಇಲಾಖೆ, ಸೂಚನೆ.
- ಭಗವಾನ್ ಬುದ್ಧನ, ಪವಿತ್ರ ಪಿಪ್ರಹ್ವಾ ಅವಶೇ ಗಳ, ಪ್ರದರ್ಶನ; ಹೊಸ ದಿಲ್ಲಿಯಲ್ಲಿ ಇಂದು ಪ್ರಧಾನಮಂತ್ರಿ ಉದ್ಘಾಟನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>